ಪ್ರಜಾವಾಣಿ

*ಜೈನ್ ವಿಶ್ವವಿದ್ಯಾಲಯ ಸಹ ಕುಲಪತಿ ಡಾ. ಸಂದೀಪ್ ಶಾಸ್ತ್ರಿ ವಿಷಾದ*

# ಸಂಸದೀಯ ವ್ಯವಸ್ಥೆ ಕಾರ್ಯನಿರ್ವಹಣೆಯಲ್ಲಿ ಸೋತ ಜನಪ್ರತಿನಿಧಿಗಳು

**ಪ್ರಜಾವಾಣಿ ವಾರ್ತೆ**

ಬೆಂಗಳೂರು: 'ನಮ್ಮ ದೇಶದ ಸಂಸದೀಯ ವ್ಯವಸ್ಥೆಯು ಉತ್ತಮವಾಗಿದ್ದು, ಇದರ ಕಾರ್ಯ ನಿರ್ವಹಣೆಯಲ್ಲಿ ಜನಪ್ರತಿನಿಧಿಗಳು ಸೋತಿದ್ದಾರೆ' ಎಂದು ಜೈನ್ ವಿಶ್ವವಿದ್ಯಾಲಯದ ಸಹ ಕುಲಪತಿ ಡಾ.ಸಂದೀಪ್ ಶಾಸ್ತ್ರಿ ವಿಷಾದಿಸಿದರು.

ಆರ್.ವೆಂಕಟರಾಮನ್ ಸ್ಮಾರಕ ಸಮಿತಿಯು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ನಾಲ್ಕನೇ ಆರ್.ವೆಂಕಟರಾಮನ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಭಾರತದ ಸಂಸದೀಯ ವ್ಯವಸ್ಥೆ ಕಾರ್ಯನಿರ್ವಹಣೆಯ ಸವಾಲುಗಳು' ವಿಷಯ ಕುರಿತು ಅವರು ಮಾತನಾಡಿದರು.

'ನಮ್ಮ ಸರ್ಕಾರಗಳಲ್ಲಿ ಚುನಾಯಿತ ಪ್ರತಿನಿಧಿಗಳು ಪಾಲ್ಗೊಳ್ಳುವುದಕ್ಕಿಂತ, ಮೇಲ್ಮನೆ ಪ್ರತಿನಿಧಿಗಳ ಭಾಗವಹಿಸುವಿಕೆ ಹೆಚ್ಚಾಗಿದೆ. ಮೇಲ್ಮನೆಗಳ ಸದಸ್ಯರೇ ಸರ್ಕಾರದ ಪ್ರಮುಖ ಖಾತೆಗಳನ್ನು ಹೊಂದಿದ್ದಾರೆ. ನಮ್ಮ ಇಂದಿನ ಪ್ರಧಾನಿಯೂ ರಾಜ್ಯಸಭೆಯಿಂದ ಆಯ್ಕೆಯಾದವರು.




ಆರ್.ವೆಂಕಟರಾಮನ್ ಸ್ಮಾರಕ ಸಮಿತಿಯು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ನಾಲ್ಕನೇ ಆರ್.ವೆಂಕಟರಾಮನ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಮತ್ತು ಜೈನ್ ವಿಶ್ವವಿದ್ಯಾಲಯದ ಸಹ ಕುಲಪತಿ ಡಾ.ಸಂದೀಪ್ ಶಾಸ್ತ್ರಿ ಪರಸ್ಪರ ಮಾತುಕತೆ ನಡೆಸಿದರು -ಪ್ರಜಾವಾಣಿ ಚಿತ್ರ

ನಮ್ಮ ರಾಜ್ಯದ ಅನೇಕ ಸಂಸದೀಯ ಸ್ಥಾನದ ಸಚಿವರೂ ವಿಧಾನ ಪರಿಷತ್ತಿನಿಂದ ಆಯ್ಕೆಗೊಂಡವರು. ಇದು ನಮ್ಮ ಸಂಸದೀಯ ವ್ಯವಸ್ಥೆಯ ದೋಷವಾಗಿದೆ. ಸಂಸತ್ತಿನ ಜವಾಬ್ದಾರಿಗಳು ಸಮರ್ಪಕವಾಗಿ ಹಂಚಿಕೆಯಾಗಬೇಕು' ಎಂದು ಅವರು ಹೇಳಿದರು.

'ಇಂಗ್ಲೆಂಡ್ ಸೇರಿದಂತೆ ಮುಂದುವರಿದ ದೇಶಗಳಲ್ಲಿ ಹೊಸ ಒಳನೋಟಗಳಿಂದ ಸಂಸದೀಯ ವ್ಯವಸ್ಥೆಯು ಬೆಳವಣಿಗೆ ಕಾಣುತ್ತಿದೆ. ಆದರೆ ನಮ್ಮಲ್ಲಿ ವ್ಯವಸ್ಥೆಯ ಸುಧಾರಣೆ ಬಗ್ಗೆ ಜನಪ್ರತಿನಿಧಿಗಳಿಗೆ ಕಾಳಜಿ ಇಲ್ಲ. ಹೀಗಾಗಿಯೇ ರಾಷ್ಟ್ರಪತಿಗಳಾಗಿದ್ದ ಆರ್.ವೆಂಕಟರಾಮನ್ ಅವರು, ದೇಶದಲ್ಲಿ ಸಂಸದೀಯ ವ್ಯವಸ್ಥೆಯು ಸಂಪೂರ್ಣ ಸುಧಾರಿಸುವವರೆಗೂ ರಾಷ್ಟ್ರಪತಿ ಆಡಳಿತವನ್ನು ಅಳವಡಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದ್ದರು' ಎಂದು ಅವರು ಹೇಳಿದರು.

'ನಮ್ಮ ಸಂಸದೀಯ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳೂ ತಮ್ಮ ಜವಾಬ್ದಾರಿಯನ್ನು ಮರೆತಿವೆ. ವಿರೋಧ ಪಕ್ಷದ ನಾಯಕರು ಸಂಸತ್ತಿನಲ್ಲಿ ಗದ್ದಲ ಮಾಡುವುದೇ ತಮ್ಮ ಕೆಲಸ ಎಂದು ತಿಳಿದಿರುವಂತಿದೆ. ಸಂಸತ್ತಿನಲ್ಲಿ ಮೌಲ್ಯಯುತ ಚರ್ಚೆಗಳು ನಡೆಯದೇ ಕಲಾಪಗಳು ವ್ಯರ್ಥವಾಗುತ್ತಿದೆ.

ನಮ್ಮ ಜನಪ್ರತಿನಿಧಿಗಳ ದೋಷಗಳ ಬಗ್ಗೆ ಪುನರ್ ಅವಲೋಕನ ನಡೆಯಬೇಕಿದೆ' ಎಂದು ತಿಳಿಸಿದರು.

'ಮತದಾನ ಮಾಡುವಾಗ ಯೋಗ್ಯ ಜನಪ್ರತಿನಿಧಿ ಕಣದಲ್ಲಿ ಇಲ್ಲ ಎಂಬ ಸಂದರ್ಭದಲ್ಲಿ ತಮ್ಮ ಮತವನ್ನು ಯಾರಿಗೂ ನೀಡುತ್ತಿಲ್ಲ ಎಂಬ ಆಯ್ಕೆಯನ್ನು ಮತದಾರನಿಗೆ ನೀಡಬೇಕು ಎಂದು ಅಣ್ಣಾ ಹಜಾರೆ ಒತ್ತಾಯಿಸಿದರು. ಆದರೆ, ಪ್ರತಿ ಚುನಾವಣೆಯಲ್ಲೂ ಅಯೋಗ್ಯರೇ ಕಣದಲ್ಲಿದ್ದರೆ ಜನಪ್ರತಿನಿಧಿಗಳ ಆಯ್ಕೆಯೇ ಗೊಂದಲವಾಗುತ್ತದೆ. ಹೀಗಾಗಿ ನಮ್ಮಲ್ಲಿ ಚುನಾವಣಾ ಸುಧಾರಣೆಯೂ ತೊಡಕಿನ ವಿಚಾರವೇ ಆಗಿದೆ' ಎಂದು ಅವರು ಹೇಳಿದರು.

'ಸಂಸದೀಯ ವ್ಯವಸ್ಥೆಯಲ್ಲಿ ಏನೆಲ್ಲ ಅವ್ಯವಸ್ಥೆಗಳಿದ್ದರೂ ಮುಂದೊಂದು ದಿನ ಭರವಸೆಯ ಬೆಳಕು ಕಾಣಬಹುದು ಎಂದು ಆರ್.ವೆಂಕಟರಾಮನ್ ಹೇಳುತ್ತಿದ್ದರು. ಅಂತಹ ಭರವಸೆಯ ಬೆಳಕಿಗಾಗಿ ಕಾಯುವುದೇ ಸದ್ಯ ನಮ್ಮ ಮುಂದಿರುವ ಆಶಾವಾದ' ಎಂದರು.

ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಮಾತನಾಡಿ, 'ಸದ್ಯ ದೇಶದಲ್ಲಿ ರಾಜಕೀಯ ಸ್ಥಿತಿ ಹಾಳಾಗಿದೆ. ಪ್ರಜಾಪ್ರಭುತ್ವದ ಮೌಲ್ಯಗಳು ಕುಸಿದಿವೆ' ಎಂದು ವಿಷಾದಿಸಿದರು.